# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 529 |
| ಸದಸ್ಯರ ಹೆಸರು | ಶ್ರೀ ಮಂಜುನಾಥ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 12.12.2024 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರಿನಲ್ಲಿ ಪಿಲಿಕುಳ ಪ್ರಾಧಿಕಾರವನ್ನು ರಚಿಸಲು ಬೇಡಿಕೆಯಿದ್ದು; ಈ ಕುರಿತು ಸರಕಾರ ಏನು ಕ್ರಮವಹಿಸಿದೆ; ಯಾವಾಗ ಪ್ರಾಧಿಕಾರವನ್ನು ರಚಿಸಲಾಗುವುದು; | ಮಂಗಳೂರಿನಲ್ಲಿರುವ ಪಿಲಿಕುಳ ನಿಸರ್ಗಧಾಮ ಮತ್ತು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಒಟ್ಟು ಸೇರಿಸಿ '**ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**'ವಾಗಿ ರಚನೆ ಮಾಡಿ ಸರ್ಕಾರದಿಂದ 2018 ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. |
| ಆ) | ಪಿಲಿಕುಳ ಮೃಗಾಲಯದಲ್ಲಿರುವ ಪ್ರಾಣಿಗಳನ್ನು ವಿವಿಧ ದೇಶಗಳ ಪ್ರಾಣಿ ಸಂಗ್ರಹಾಲಯದಿಂದ ವಿನಿಮಯ ಮಾಡಿಕೊಂಡು ಅಂತರಾಷ್ಟ್ರೀಯ ನಿಸರ್ಗಧಾಮವನ್ನಾಗಿ ಅಭಿವೃದ್ಧಿ ಪಡಿಸಲು ಮನವಿ ಸಲ್ಲಿಸಿದ್ದು, ಈ ಕುರಿತು ಕ್ರಮ ವಹಿಸಿದೆಯೇ? ಹಾಗಿದ್ದಲ್ಲಿ, ಯಾವಾಗ ಕ್ರಮ ವಹಿಸಲಾಗುವುದು; | ಪಿಲಿಕುಳ ಮೃಗಾಲಯಕ್ಕೆ ದೇಶದ ವಿವಿಧ ಮೃಗಾಲಯಗಳಿಂದ ಕೇಂದ್ರ ಮೃಗಾಲಯದ ಅನುಮತಿ ಪಡೆದು ಪ್ರಾಣಿ ವಿನಿಮಯ ಕಾರ್ಯಕ್ರಮಗಳ ಮೂಲಕ ಪ್ರಾಣಿಗಳನ್ನು ತರಿಸುವುದು ಮತ್ತು ಪಿಲಿಕುಳ ಮೃಗಾಲಯದಲ್ಲಿ ಇರುವಂತಹ ಹೆಚ್ಚುವರಿ ಪ್ರಾಣಿಗಳನ್ನು ರವಾನಿಸಲಾಗುತ್ತದೆ. 2008 ರಿಂದಲೇ ಪ್ರಾಣಿಗಳ ವಿನಿಮಯ ಕಾರ್ಯಕ್ರಮವು ನಡೆಯುತ್ತಿದೆ.<br><br>ಪಿಲಿಕುಳ ಜೈವಿಕ ಉದ್ಯಾನವನದಲ್ಲಿ ಪಶ್ಚಿಮ ಘಟ್ಟದ ಪ್ರಾಣಿ ಪಕ್ಷಿ ಹಾಗೂ ಉರಗ ಪ್ರಭೇದಗಳಿಗೆ ಪ್ರಮುಖ ಆದ್ಯತೆಯನ್ನು ನೀಡಲಾಗುತ್ತಿದೆ. ಅಂಗಿಕೃತ ಮಾಸ್ಟರ್ ಪ್ಲಾನ್‌ನಂತೆ ಎರಡನೇ ಆದ್ಯತೆಯನ್ನು ಭಾರತದ ಪ್ರಾಣಿ, ಪಕ್ಷಿ ಉರಗ ಪ್ರಭೇದಗಳಿಗೆ ನೀಡಲಾಗುತ್ತದೆ.<br><br>ಮೃಗಾಲಯ ಪ್ರದೇಶದ ಹವಮಾನಕ್ಕೆ ಹೊಂದಿಕೊಳ್ಳುವಂತಹ ವಿದೇಶಿ ತಳಿಯ |

| | | |
|---|---|---|
| | | ಪ್ರಾಣಿಗಳನ್ನು ಇರಿಸಿಕೊಳ್ಳಬೇಕಾಗುತ್ತದೆ. ಈಗಾಗಲೇ ಪಿಲಿಕುಳ ಮೃಗಾಲಯವು ಸುಮಾರು 57 ವಿದೇಶಿ ತಳಿಯ ಪ್ರಾಣಿಗಳನ್ನು ಹೊಂದಿದೆ. |
| ಇ) | ಈ ಪ್ರಾಧಿಕಾರವನ್ನು ರಚಿಸದಿರುವ ಕಾರಣ ಅಲ್ಲಿಯ ಮೃಗಾಲಯ ಮತ್ತು ವಿಜ್ಞಾನ ಕೇಂದ್ರಗಳ ನಿರ್ವಹಣೆ ಮೇಲ್ವಿಚಾರಣೆಗೆ ಪೂರ್ಣಕಾಲಿಕ ಅಧಿಕಾರಿಗಳು ಇಲ್ಲದಿರುವುದನ್ನು ಗಮನಿಸಿ ಯಾವಾಗ ಪೂರ್ಣಕಾಲಿಕ ಅಧಿಕಾರಿಗಳನ್ನು ನೇಮಿಸಲು ಉದ್ದೇಶಿಸಿದೆ: | ಮೃಗಾಲಯದ ನಿರ್ವಹಣೆಯ ಮೇಲ್ವಿಚಾರಣೆಗೆ ನಿರ್ದೇಶಕರ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ನಿರ್ವಹಿಸಲಾಗುತ್ತಿದೆ.<br><br>ಸರ್ಕಾರಿ ಆದೇಶ ಸಂಖ್ಯೆ ಐಟಿಬಿಟಿ /95/ಎಸ್‌ಟಿಎಸ್/2023 ಬೆಂಗಳೂರು ದಿನಾಂಕ 12.09.2024 ರಂತೆ ಪಿಲಿಕುಳ ಜೈವಿಕ ಉದ್ಯಾನವನಕ್ಕೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ACF) ತತ್ಸಮಾನ ವೃಂದದ ನಿರ್ದೇಶಕರು (ಜೈವಿಕ ಉದ್ಯಾನವನ) ಒಂದು ಹುದ್ದೆಯನ್ನು ಸೃಜಿಸಿ ಮಂಜೂರಾಗಿರುತ್ತದೆ.<br><br>ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ವಹಣೆಗೆ ನಿರ್ದೇಶಕರ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ನಿರ್ವಹಿಸಲಾಗುತ್ತಿದೆ. |
| ಈ) | ಪಿಲಿಕುಳ ನಿಸರ್ಗಧಾಮದ ಸಿಬ್ಬಂದಿಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳಿಲ್ಲದ ಕಾರಣ ಕಳೆದ 20 ವರ್ಷಗಳಿಂದ ಅಧಿಕಾರಿಗಳ ಸೇವಾ ಭದ್ರತೆಯಿಲ್ಲದೆ ಕಡಿಮೆ ವೇತನದಲ್ಲಿ ಬದುಕುತ್ತಿದ್ದು, ಈ ಕುರಿತು ಸರಕಾರ ಯಾವಾಗ ಅಗತ್ಯ ಕ್ರಮ ಕೈಗೊಳ್ಳುವುದೆ? | ಈ ಹಿಂದೆ ಪಿಲಿಕುಳ ನಿಸರ್ಗಧಾಮವು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ನಿಸರ್ಗಧಾಮಕ್ಕೆ ಸರ್ಕಾರದಿಂದ ಯಾವುದೇ ಖಾಯಂ ಹುದ್ದೆಗಳು ಮಂಜೂರಾಗಿರುವುದಿಲ್ಲ. ನಿಸರ್ಗಧಾಮಕ್ಕೆ ಅಗತ್ಯವಿರುವ ಸಿಬ್ಬಂದಿಗಳನ್ನು ನೇರ ನೇಮಕಾತಿ/ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡು ಕಾರ್ಯನಿರ್ವಹಿಸಲಾಗುತ್ತಿದ್ದು, ಪಿಲಿಕುಳ ನಿಸರ್ಗಧಾಮಕ್ಕೆ ಖಾಯಂ ಹುದ್ದೆಗಳು ಮಂಜೂರಾಗದ ಕಾರಣ ವೃಂದ ಮತ್ತು ನೇಮಕಾತಿ ನಿಯಮಗಳು ಅನ್ವಯಿಸುವುದಿಲ್ಲ. |

(5)

| | | |
|---|---|---|
| | | ಪಿಲಿಕುಳ ನಿಸರ್ಗಧಾಮವು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವಾಗಿ 2018 ರಲ್ಲಿ ವಿಲೀನಗೊಂಡ ಮೇಲೆ ಪ್ರಸ್ತುತ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ಆಯುಕ್ತರು-1, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ACF) ತತ್ಸಮಾನ ವೃಂದದ ನಿರ್ದೇಶಕರು (ಜೈವಿಕ ಉದ್ಯಾನವನ) -1, ಒಟ್ಟು 2 ಹುದ್ದೆಗಳನ್ನು ಸೃಜಿಸಿ ಸರ್ಕಾರದಿಂದ ಮಂಜೂರಾಗಿರುತ್ತದೆ.<br><br>ಅಲ್ಲದೆ, ಪಿಲಿಕುಳ ನಿಸರ್ಗಧಾಮದಲ್ಲಿ ನೇರ ನೇಮಕಾತಿ ಮೂಲಕ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳನ್ನು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಲು ಹಾಗೂ ಸದರಿ ಹುದ್ದೆಗಳ ಸೃಜನೆ ಮಾಡಲು ಕ್ರಮವಹಿಸಲಾಗುವುದು. |

ಸಂಖ್ಯೆ: ಐಟಿಬಿಟಿ 258 ಎಸ್‌ಟಿಎಸ್ 2024

(ಎನ್.ಎಸ್. ಭೋಸರಾಜು)
ಮಾನ್ಯ ಸಣ್ಣ ನೀರಾವರಿ,
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಎನ್.ಎಸ್. ಭೋಸರಾಜು
ಸಣ್ಣ ನೀರಾವರಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು